**ದಿನಾಂಕ 18-04-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು - ಅರ್ಜಿದಾರರ ಪರ ಶ್ರೀ ಕೆ.ಎಸ್.ಹೆಚ್., ವಕೀಲರಿಂದಃ**

ದಾವಾ ಸರ್ವೆ ನಂಬ್ರ.8/2 ರ ಒಟ್ಟು ವಿಸ್ತೀರ್ಣ 18 ಸೆಂಟ್ಸ್ ಎಂದು ಡಿಕ್ರಿಯಲ್ಲಿ ನಮೂದು ಇರುತ್ತದೆ. ಆದರೆ ಅಳತೆ ಮಾಡುವಾಗ ಅಲ್ಲಿ 13 ಸೆಂಟ್ಸ್ ಮಾತ್ರ ಕಂಡು ಬಂದಿರುತ್ತದೆ. ಸದರಿ ಆಸ್ತಿಯ ಸರ್ವೆ ನಕಾಶೆಯಲ್ಲಿ (I) ಎಂದು ನಮೂದಿಸಿರುವುದು ದಾವಾ ಆಸ್ತಿಯಾಗಿರುವುದಿಲ್ಲ. ಸದರಿ (I) ಎಂದು ನಮೂದಿಸಿರುವ ಆಸ್ತಿಯಲ್ಲಿ ಅಕ್ಕಣಿ ಪೂಜಾರ್ತಿಯವರಿಗೆ ಹಾಗೂ ಇತರರಿಗೆ ಸೇರಿದ ಆಸ್ತಿಗಳು ಇರುತ್ತದೆ. ನಾನು ದಾವಾ ಸರ್ವೆ ನಂಬ್ರ.8/2 ರಲ್ಲಿ ಇರುವ 13 ಸೆಂಟ್ಸ್ ಆಸ್ತಿಯನ್ನು ಎರಡು ವಿಭಾಗಗಳಾಗಿ ವಿಂಗಡಿಸಿರುವುದಿಲ್ಲ ಯಾಕೆಂದರೆ ನ್ಯಾಯಾಲಯದ ಆಯುಕ್ತರು ನನಗೆ ಆ ರೀತಿ ಸೂಚಿಸಿರುವುದಿಲ್ಲ.

**ಪಾಟೀ ಸವಾಲು** - ಎದುರುದಾರರ ಪರ ವಕೀಲರು ಗೈರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ನ್ಯಾಯಾಲಯದ ಪ್ರಶ್ನೆ**- ಸರ್ವೆ ನಂಬ್ರ.8/2 ರಲ್ಲಿ ಇರುವ ಮನೆಯಲ್ಲಿ ಯಾರು ವಾಸವಾಗಿರುತ್ತಾರೆ?

**ಉತ್ತರಃ** ಅರ್ಜಿದಾರರ ಬೇರೆ ಸಂಬಂದಿಕರು ವಾಸವಾಗಿದ್ದರು, ಯಾರು ಎಂದು ನನಗೆ ಮಾಹಿತಿ ಇಲ್ಲ.

**ಮರು ವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ. ಉಡುಪಿ.